<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ</u>
<u>ಘನ ನ್ಯಾಯಾಲಯದಲ್ಲಿ</u>
<u>ಪ್ರಕರಣ ಸಂಖ್ಯೆ: ಎಸ್.ಸಿ 26/2020</u>

ದಿನಾಂಕ: **08.02.2022**
(ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.)

ಪ್ರಾ.ಸಾ: **11** (ಚಾ.ಸಾ.18)

| | | |
|---|---|---|
| ಹೆಸರು | : | ಪ್ರಕಾಶ ಬಿ.ಕೆ. |
| ತಂದೆಯ ಹೆಸರು | : | ಕೆಂಚಪ್ಪಗೌಡ |
| ವಯಸ್ಸು | : | 38 ವರ್ಷ |
| ಉದ್ಯೋಗ | : | ಆರಕ್ಷಕ ನಿರೀಕ್ಷಕರು |
| ವಾಸ ಸ್ಥಳ | : | ಚನ್ನಪಟ್ಟಣ |

<u>ಮುಖ್ಯ ವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ:</u>

ನಾನು ತಾ: **12.03.2020** ರಿಂದ ತಾ: **09.04.2021** ರವರೆಗೆ ಚನ್ನಪಟ್ಟಣದ ಪೂರ್ವ ಪೊಲೀಸ್ ಠಾಣೆಯಲ್ಲಿ ಪಿಎಸ್ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

**2.** ತಾ: **20.03.2020** ರಂದು ಈ ಕೇಸಿನ ಕಡತವನ್ನು ಹಿಂದಿನ ತನಿಖಾಧಿಕಾರಿ - ಹರೀಶರವರಿಂದ ಪಡೆದುಕೊಂಡೆನು.

**3.** ತಾ: **10.05.2020** ರಂದು ಸಾಕ್ಷಿ - ಸುಹೇಲಾ ಖಾನ್ ಮತ್ತು ಮುಷಾಪಿರ್ ಇವರುಗಳ ಹೇಳಿಕೆಗಳನ್ನು ಪಡೆದುಕೊಂಡೆನು.

**4.** ತಾ: **03.06.2020** ರಂದು ವಿಧಿ ವಿಜ್ಞಾನ ಪ್ರಯೋಗಾಲಯದ ವರದಿಯನ್ನು ಸ್ವೀಕರಿಸಿರುತ್ತೇನೆ. ಸದರಿ ವರದಿಯನ್ನು ಹಾಗು ಅದರಲ್ಲಿರುವ ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ವರದಿಯನ್ನು ಈಗ ನಿಪಿ. **6** ಎಂತಲೂ ಸಾಕ್ಷಿಯ ಸಹಿಯನ್ನು ಈಗ ನಿಪಿ.**6**(ಎ) ಎಂದು ಗುರುತಿಸಲಾಯಿತು.

**5.** ತಾ: **20.06.2020** ರಂದು ಗಾಯಾಳುವಿನ ಗಾಯದ ಪ್ರಮಾಣಪತ್ರವನ್ನು ಸ್ವೀಕರಿಸಿರುತ್ತೇನೆ. ಸದರಿ ಗಾಯದ ಪ್ರಮಾಣಪತ್ರವನ್ನು ಹಾಗು ಅದರಲ್ಲಿರುವ ತಮ್ಮ

ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಗಾಯದ ಪ್ರಮಾಣಪತ್ರವನ್ನು ಈಗ ನಿಪಿ.7 ಎಂತಲೂ ಸಾಕ್ಷಿಯ ಸಹಿಯನ್ನು ಈಗ ನಿಪಿ.7(ಎ) ಎಂದು ಗುರುತಿಸಲಾಯಿತು.

**6.** ಅದೇ ದಿನ ಸಾಕ್ಷಿ - ಜಬ್ರಾನ್ ಖಾನ್, ಇರ್ಫಾನ್ ಬೇಗ್ ಹಾಗೂ ಪೇದೆ - ಭೀಮರಾಯ್ ದಳವಾಯಿರವರ ಹೇಳಿಕೆಗಳನ್ನು ಪಡೆದಿರುತ್ತೇನೆ.

**7.** ತನಿಖೆಯಿಂದ ಆರೋಪಿಯ ವಿರುದ್ಧ ಆರೋಪ ಕಂಡು ಬಂದಿದ್ದರಿಂದ ದೋಷರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ.ಕೆವಿಕೆ., ವಕೀಲರಿಂದಃ**

**8.** ಚಾಸಾ.7 8 ಹಾಗೂ 11 ರವರ ಹೇಳಿಕೆಗಳನ್ನು ಪಡೆದುಕೊಂಡ ಸಮಯ ಈಗ ನನಗೆ ನೆನಪಿಲ್ಲ. ನಾನು ಯಾವುದೇ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದಿಲ್ಲ ಅಂದರೆ ಸರಿಯಲ್ಲ. ಯಾವುದೇ ಸಾಕ್ಷಿದಾರರು ನನ್ನ ಮುಂದೆ ಆರೋಪಿಯ ವಿರುದ್ಧ ಯಾವುದೇ ಹೇಳಿಕೆ ನೀಡಿಲ್ಲ ಅಂದರೆ ಸರಿಯಲ್ಲ.

**9.** ಗಾಯದ ಪ್ರಮಾಣಪತ್ರವನ್ನು ಈ ಪ್ರಕರಣಕ್ಕೆ ಬೇಕಾದಂತೆ ನಾನು ವೈದ್ಯರಿಂದ ಸೃಷ್ಟಿ ಮಾಡಿಸಿರುತ್ತೇನೆ ಅಂದರೆ ಸರಿಯಲ್ಲ. ಈ ಪ್ರಕರಣ ಒಂದು ಸುಳ್ಳು ಪ್ರಕರಣ ಎಂದು ನನಗೆ ತನಿಖೆ ಪ್ರಾರಂಭಿಸಿದಾಗಲೇ ಗೊತ್ತಾದ್ದರೂ ಸಹ ನಾನು ಸುಳ್ಳು ತನಿಖೆ ಮಾಡಿ, ಸುಳ್ಳು ದೋಷರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಅಂದರೆ ಸರಿಯಲ್ಲ.

**10.** ವಿದಿ ವಿಜ್ಞಾನ ಪ್ರಯೋಗಾಲಯದ ವರದಿಯನ್ನೂ ಸಹ ನಾನು ಈ ಪ್ರಕರಣಕ್ಕೆ ಬೇಕಾದಂತೆ ಸೃಷ್ಟಿಸಿರುತ್ತೇನೆ ಅಂದರೆ ಸರಿಯಲ್ಲ.

**11.** ವೈದ್ಯರಿಗೆ ಈ ಪ್ರಕರಣದಲ್ಲಿ ವಶಪಡಿಸಿಕೊಂಡ ಆಯುಧವನ್ನು ಕಳುಹಿಸಿ, ಆ ಬಗ್ಗೆ ಅವರ ಅಭಿಪ್ರಾಯವನ್ನು ಪಡೆದಿರುವುದಿಲ್ಲ. ಚಾಸಾ.3 ಮತ್ತು 4 ನನ್ನ ಮುಂದೆ ಹೇಳಿಕೆ ನೀಡಿಲ್ಲ ಅಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.

(ರಮಾ ಬಿ.ಜಿ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ರಾಮನಗರ.